ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೨೨ (೨೩೪೩)

ಸದಸ್ಯರ ಹೆಸರು ಶ್ರೀ ಬೋಪಯ್ಯ ಕೆ ಜಿ (ಮಡಿಕೇರಿ)

ಉತ್ತರಿಸುವ ಸಚಿವರು ಶ್ರೀ ಗೋವಿಂದ ಎಂ ಕಾಲದೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಕರ ವ್ಯವಹಾರಗಳ ಸಚಿವರು)

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೊಡಗು ಜಿಲ್ಲೆಗೆ ಕಳೆದ ಮೂರು ತಿಂಗಳುಗಳಿಂದ ಬಿಡುಗಡೆ ಮಾಡಲಾದ ಸೀಮೆಎಣ್ಣೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)</td><td>ಕೊಡಗು ಜಿಲ್ಲೆಗೆ ಕಳೆದ ಮೂರು ತಿಂಗಳುಗಳಿಂದ ಬಿಡುಗಡೆ ಮಾಡಲಾದ ಸೀಮೆಎಣ್ಣೆ ವಿವರಗಳು ಕೆಳಕಂಡಂತಿರುತ್ತದೆ –
(ಲೀಟರ್‌ಗಳಲ್ಲಿ)
<table>
<tr><th>ತಾಲ್ಲೂಕು</th><th>ಜನವರಿ ೨೦೦೭</th><th>ಫೇಬ್ರವರಿ ೨೦೦೭</th><th>ಮಾರ್ಚ್ ೨೦೭</th></tr>
<tr><td>ಮಡಿಕೇರಿ</td><td>೮೪೦೦೦</td><td>೯೬೦೦೦</td><td>೮೮೫೬೦</td></tr>
<tr><td>ವಿರಾಜಪೇಟೆ</td><td>೧೪೪೦೦೦</td><td>೧೫೬೦೦೦</td><td>೧೫೮೮೯೯</td></tr>
<tr><td>ಸೋಮವಾರಪೇಟೆ</td><td>೧೪೪೦೦೦</td><td>೧೬೮೦೦೦</td><td>೧೪೮೫೫೧</td></tr>
<tr><td>ಒಟ್ಟು</td><td>೩೭೨೦೦೦</td><td>೪೨೦೦೦೦</td><td>೩೯೬೦೦೦</td></tr>
</table></td></tr>
<tr><td>ಆ)</td><td>ಹಿಂದಿನ ಸಾಲಿಗಿಂತ ಈ ಸಾಲಿನಲ್ಲಿ ಕಡಿಮೆ</td><td>ಹೌದು,
ಕೊಡಗು ಜಿಲ್ಲೆಯಲ್ಲಿ ಮನೆ ಮನೆ ಸಮೀಕ್ಷೆಗೂ ಮುಂಚೆ ಜಿಲ್ಲೆಯ ಮಾಹಿತಿಯಂಎ ೧,೧೫,೭೯೧ ಅನಿಲ ರಹಿತ ಪಡಿತರ ಚೀಟಿಗಳಿಗೆ ಸೀಮೆಎಣ್ಣೆ</td></tr>
</table>

	ಸೀಮೆಎಣ್ಣೆಯನ್ನು ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,	ನೀಡಲಾಗುತ್ತಿತ್ತು ಮನೆ-ಮನೆ ಸಮೀಕ್ಷೆ ನಂತರ ತಾತ್ಕಾಲಿಕ ಪಡಿತರ ಕೂಪನ್ ವಿತರಿಸಿರುವಂತೆ ಅಕ್ಟೋಬರ್ ೨೦೦೬ ರ ಮಾಹಿಯಿಂದ ಗ್ರಾಮಾಂತರ ಪ್ರದೇಶದಲ್ಲಿ ೮೬,೫೭೭ ಅನಿಲ ರಹಿತ ತಾತ್ಕಾಲಿಕ ಪಡಿತರ ಕೂಪನ್ ಗಳಿಗೆ ಸೀಮೆಎಣ್ಣೆ ಹಂಚಿಕೆ ನೀಡಲಾಗುತ್ತಿದೆ ಇದರಿಂದಾಗಿ ೨೯,೨೧೪ ಪಡಿತರ ಚೀಟಿಗಳಿಗೆ ನೀಡುವ ಸೀಮೆಎಣ್ಣೆ ಕಡಿಮೆಯಾಗಿರುತ್ತದೆ
ಇ)	ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು (ವಿವರಗಳನ್ನು ಒದಗಿಸುವುದು)	ಸರ್ಕಾರದ ನಿಯಮಗಳ ಪ್ರಕಾರ ಅನಿಲ ರಹಿತ ಕಾರ್ಡುಗಳ ಸಂಖ್ಯೆಗಳಿಗನುಗುಣವಾಗಿ ಸೀಮೆಎಣ್ಣೆ ಬಿಡುಗಡೆಯಾಗುತ್ತಿದ್ದು ಅನಿಲ ಸಂಪರ್ಕ ಹೊಂದಿದ ಕಾರ್ಡುಗಳಿಗೆ ಸೀಮೆಎಣ್ಣೆ ವಿತರಿಸಲು ಅವಕಾಶವಿರುವುದಿಲ್ಲ ಇದರಿಂದ ಕೇವಲ ಅನಿಲ ರಹಿತ ಕಾರ್ಡ್ ಗಳ ಸಂಖ್ಯೆಗೆ ಸೀಮೆಎಣ್ಣೆ ಬಿಡುಗಡೆಯಾಗುತ್ತಿದ್ದು ಜಿಲ್ಲೆಗೆ ಬಿಡುಗಡೆಯಾಗುತ್ತಿರುವ ಸೀಮೆಎಣ್ಣೆಯ ಪ್ರಮಾಣದಲ್ಲಿ ಈ ಹಿಂದಿನ ಸಾಲಿಗಿಂತ ಕಡಿತಗೊಂಡಿರುತ್ತದೆ
ಈ)	ಈ ಹಿಂದೆ ಸರ್ಕಾರಿ ಆಹಾರ, ಪಡಿತರ ಚೀಟಿಯಲ್ಲಿ ಒಂದು ಕಾರ್ಡಿಗೆ ೨೦ ಕೆಜಿ ಅಕ್ಕಿಯನ್ನು ನೀಡಲಾಗುತ್ತಿದ್ದು, ಪ್ರಸ್ತುತ ಬದಲಾವಣೆ ಮಾಡಲಾಗಿದ್ದಲ್ಲಿ?	ಬಿಪಿಎಲ್ ಪಡಿತರ ಚೀಟಿದಾರರಿಗೆ ಫೆಬ್ರವರಿ ೨೦೦೭ರ ಮಾಹಿಯಿಂದ ಯೂನಿಟ್ ಆಧಾರದ ಮೇಲೆ ಆಹಾರಧಾನ್ಯ ವಿತರಿಸುವ ಪದ್ಧತಿ ಜಾರಿಗೆ ತರಲಾಗಿದೆ ಅದರಂತೆ, ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ೪ ಕೆಜಿ ಅಕ್ಕಿ, ೧ ಕೆಜಿ ಗೋಧಿ/ರಾಗಿ, (ಪ್ರತಿ ಬಿಪಿಎಲ್ ಪಡಿತರ ಚೀಟಿಗೆ ಗರಿಷ್ಟ ೨೫ ಕೆಜಿ ಅಕ್ಕಿ/ಗೋಧಿ/ರಾಗಿ ಮಿತಿಗೆ ಒಳಪಟ್ಟು/ ನೀಡಲಾಗುತ್ತಿದೆ

ಉ)	ಇದಕ್ಕೆ ಕಾರಣಗಳೇನ ು ?	ಯೂನಿಟ್ ಪದ್ಧತಿಯನ್ನು ಜಾರಿಗೆ ತರಲಾಗಿರುವುದರಿಂದ ಏಕ ಸದಸ್ಯ ದ್ವಿ ಸದಸ್ಯ, ತ್ರಿಸದಸ್ಯ ಕುಟುಂಬಗಳಿಗೆ ಅಗತ್ಯಕ್ಕಿಂತ ಹೆಚ್ಚಿಗೆ ನೀಡುವ ಸರಕಾರದ ಸಹಾಯಧನಯುಕ್ತ ಆಹಾರಧಾನ್ಯಗಳು ಬಹುತೇಕ ಪ್ರಮಾಣದಲ್ಲಿ ಎತ್ತುವಳಿಯಾಗದೇ ಅಪಮಾರ್ಗ ಹಿಡಿಯುವುದನ್ನು ತಪ್ಪಿಸಿದಂತಾಗುತ್ತದೆ ಬಹುತೇಕ ಬಡ ಕುಟುಂಬಗಳು ಗ್ರಾಮಾಂತರ ಪ್ರದೇಶದಲ್ಲಿ ಎಸ್ ಜಿ ಆರ್ ವೈ ಯೋಜನೆಯಡಿ ಮತ್ತು ಸಮಗ್ರ ಗ್ರಾಮೀಣಾಭಿವೃದ್ಧಿ [redacted]

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೭೨೩ (೧೯೯೮)

ಸದಸ್ಯರ ಹೆಸರು ಶ್ರೀ ಭೋಸರಾಜು ಎನ್ ಎಸ್ (ಮಾನ್ವಿ)

ಉತ್ತರಿಸುವ ಸಚಿವರು ಶ್ರೀ ಬಂಡೆಪ್ಪ ಖಾಶೆಂಪೂರ (ಕೃಷಿ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?	ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ
ಆ)	ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?	ಆದಷ್ಟು ಶೀಘ್ರದಲ್ಲಿ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು